# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 555(643) |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ(ವಿಧಾನ ಸಭೆಯಿಂದ ಆಯ್ಕೆಯಾದವರು) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪ್ರಾದೇಶಿಕ ಅಸಮತೋಲನ ನಿವಾರಣೆ ಕುರಿತು ಪ್ರೊ.ಎಂ.ಗೋವಿಂದರಾವ್ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ಅಂತಿಮ ವರದಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದಿರುವಿಕೆ ಶೇ.65 ರಿಂದ ಶೇ 72.8ಕ್ಕೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರೊ ಎಂ. ಗೋವಿಂದ ರಾವ್ ಅಧ್ಯಕ್ಷರು ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಇವರು ದಿನಾಂಕ:31.01.2026ರಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ದಿನಾಂಕ:26.02.2026ರಂದು ನಡೆದ ರಾಜ್ಯ ಸಚಿವ ಸಂಪುಟವು ಅಂಗೀಕರಿಸಿದ್ದು, ವಿಧಾನ ಮಂಡಲದಲ್ಲಿ ಮಂಡಿಸಲು ಅನುಮೋದನೆ ನೀಡಿರುತ್ತದೆ. ವಿಧಾನ ಮಂಡಲದಲ್ಲಿ ವರದಿ ಮಂಡನೆಯಾದ ನಂತರ ಕಲ್ಯಾಣ ಕರ್ನಾಟಕ ಭಾಗವು ಹಿಂದುಳಿದಿರುವಿಕೆಯಲ್ಲಿ ಶೇ.65 ರಿಂದ ಶೇ 72.8ಕ್ಕೆ ಏರಿಕೆಯಾಗಿರುವುದು ತಿಳಿದು ಬರುತ್ತದೆ. |
| ಆ) | ಸದರಿ ಸಮಿತಿಯು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಶಿಫಾರಸ್ಸು ಮಾಡಿರುವ 11,770ಕೋಟಿ ರೂ.ಗಳ ವಿಶೇಷ ಅನುದಾನದಲ್ಲಿ ಅತೀ ಹೆಚ್ಚು ಹಿಂದುಳಿದ ಜಿಲ್ಲೆಯಾಗಿರುವ ಕಲಬುರಗಿಯ ಆರೋಗ್ಯ ಮೂಲ ಸೌಕರ್ಯಕ್ಕೆ ಎಷ್ಟು ಮೊತ್ತವನ್ನು ಮೀಸಲಿಡಲು ಸರ್ಕಾರ ಯೋಜಿಸಿದೆ. | ವಿಧಾನ ಮಂಡಲದಲ್ಲಿ ಪ್ರೊ ಎಂ ಗೋವಿಂದ ರಾವ್ ರವರ ವರದಿ ಮಂಡಿಸಿದ ನಂತರ ಆರ್ಥಿಕ ಇಲಾಖೆಯು ಅನುದಾನ ಹಂಚಿಕೆ ಮಾಡಿದ್ದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಶಿಫಾರಸ್ಸು ಮಾಡಿರುವ ಅನುದಾನವನ್ನು ಮೀಸಲಿಡಲಾಗುತ್ತದೆ. |
| ಇ) | ಕಲಬುರಗಿಯ ಕಿದ್ವಾಯಿ ಪೆರಿಫೆರಲ್ ಆಸ್ಪತ್ರೆಯಲ್ಲಿ ಕಳೆದ 6 ವರ್ಷಗಳಿಂದ ಒಬ್ಬರೇ ಒಬ್ಬರು ಕಿಮೋಥೆರಪಿ ತಜ್ಞರಿಲ್ಲದೆ (Medical Oncologist) ಬಡ ರೋಗಿಗಳು ಸಾವನ್ನಪ್ಪುತ್ತಿರುವುದು ಈ ವರದಿಯಲ್ಲಿ ಉಲ್ಲೇಖಿಸಲಾದ "ನಿರ್ಲಕ್ಷ್ಯ'ಕ್ಕೆ ಸಾಕ್ಷಿಯಲ್ಲವೇ: ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಇರುವ ಅಡಚಣೆಗಳೇನು? | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಮತ್ತು ಪೆರಿಫೆರಲ್ ಕ್ಯಾನ್ಸರ್ ಕೇಂದ್ರ, ಕಲ್ಬುರ್ಗಿ ಇಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಕೆಲವು ಗ್ರೂಪ್-ಎ, ಬಿ ಮತ್ತು ಸಿ ವೃಂದಗಳಲ್ಲಿ 413 ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಸರ್ಕಾರವು ದಿನಾಂಕ: 15.01.2025ರ ಪತ್ರದಲ್ಲಿ ತನ್ನ ಅನುಮೋದನೆಯನ್ನು ನೀಡಿರುತ್ತದೆ.<br>ಮೇಲ್ಕಂಡ 413 ಹುದ್ದೆಗಳಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ, ಕಲ್ಬುರ್ಗಿಗೆ 10 ಹುದ್ದೆಗಳನ್ನು ಖಾಯಂ ಆಗಿ ನೇಮಕಾತಿ ಮಾಡಲು ಅನುಮೋದನೆಯಾಗಿರುತ್ತದೆ. ಅವುಗಳಲ್ಲಿ 07 ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಒಳಗೊಂಡಿರುತ್ತದೆ. ಇವುಗಳಲ್ಲಿ ಮೆಡಿಕಲ್ ಆಂಕಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ನೇಮಕಾತಿ ಮಾಡಲು ಅನುಮೋದನೆಯಾಗಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಮೀಸಲಾತಿ ರೋಸ್ಟರ್ ಬಿಂದುಗಳನ್ನು ದೃಢೀಕರಿಸುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಯು ಬಂದ ನಂತರ ಖಾಯಂ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲು ಕ್ರಮಕೈಗೊಳ್ಳಲಾಗುವುದು.<br>ಮುಂದುವರೆದಂತೆ, ಪೆರಿಫೆರಲ್ ಕ್ಯಾನ್ಸರ್ ಕೇಂದ್ರ, ಕಲ್ಬುರ್ಗಿ ಇಲ್ಲಿ ರೋಗಿಗಳ ಆರೈಕೆಯ ಹಿತದೃಷ್ಟಿಯಿಂದ |

| | | |
|---|---|---|
| | | ಹಾಗೂ ಕ್ಯಾನ್ಸರ್ ರೋಗಿಗಳಿಗೆ ಗುಣಾತ್ಮಕವಾದ ಚಿಕಿತ್ಸೆಯನ್ನು ನೀಡಲು ಕಿಮೋಥೆರಪಿ ಚಿಕಿತ್ಸೆಯನ್ನು ನೀಡುವ ಮೆಡಿಕಲ್ ಆಂಕಾಲಜಿಸ್ಟ್ ಡಾ : ಮಂಜುನಾಥ್ ರವರನ್ನು ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ ನೇಮಕಾತಿ ಮಾಡಲಾಗಿರುತ್ತದೆ. |
| ಈ) | ನಂಜುಂಡಪ್ಪ ವರದಿಯಡಿ ಮಂಜೂರಾದ 43,453 ಕೋಟಿ ರೂ.ಗಳಲ್ಲಿ ಸುಮಾರು 11,000 ಕೋಟಿ ರೂ. ಗಳಷ್ಟು ಹಣ ಬಳಕೆಯಾಗದೆ ಬಾಕಿ ಉಳಿಯಲು ಕಾರಣಗಳೇನು: ಇದರಿಂದ ಉತ್ತರ ಕರ್ನಾಟಕದ ತಾಲ್ಲೂಕುಗಳು ಅಭಿವೃದ್ಧಿಯಲ್ಲಿ ಹಿಂದುಳಿಯಲು ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೆ ಗೊಳ್ಳಾಗಿದೆಯೇ? | ಡಾ. ಡಿ. ಎಂ. ನಂಜುಂಡಪ್ಪ ವರದಿಯನ್ವಯ 2007-08ರಿಂದ 2024-25ರ ವರೆಗೆ ಆರ್ಥಿಕ ಇಲಾಖೆಯು ವಿವಿಧ ಇಲಾಖೆಗಳ ಕಾರ್ಯಕ್ರಮಗಳಿಗೆ ರೂ.48866.49 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ರೂ.40159.43 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಲ್ಲಿ ರೂ.36866.56 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ. ಬಿಡುಗಡೆ ಮತ್ತು ವೆಚ್ಚದ ನಡುವಿನ ಅಂತರಕ್ಕೆ ಆಯಾ ಇಲಾಖೆಗಳೇ ಜವಾಬ್ದಾರಿಯಾಗಿರುತ್ತವೆ. |
| ಉ) | ಗೋವಿಂದರಾವ್ ಸಮಿತಿಯು ಶಿಫಾರಸ್ಸು ಮಾಡಿರುವ 43,914 ಕೋಟಿ ರೂ.ಗಳ ಹೆಚ್ಚುವರಿ ಆರ್ಥಿಕ ನೆರವನ್ನು ಜಾರಿಗೊಳಿಸಲು ಸರ್ಕಾರ ಕಾಲಮಿತಿಗಳ ಯೋಜನೆಯನ್ನು ರೂಪಿಸಿದೆಯೇ: ಈ ಅನುದಾನದಲ್ಲಿ ಕಲಬುರಗಿಯ 250 ಹಾಸಿಗೆಗಳ ನೂತನ ಆಸ್ಪತ್ರೆಗೆ ವಿಶೇಷ ಅನುದಾನ ನೀಡಲಾಗುವುದೇ? | ಪ್ರೊ ಎಂ. ಗೋವಿಂದ ರಾವ್ ರವರ ಸಮಿತಿಯು ಶಿಫಾರಸ್ಸು ಮಾಡಿರುವ ರೂ.43,914 ಕೋಟಿ ಅನುದಾನದಲ್ಲಿ ಕಲ್ಬುರ್ಗಿ ಜಿಲ್ಲೆಯಲ್ಲಿ 250 ಹಾಸಿಗೆಗಳ ನೂತನ ಆಸ್ಪತ್ರೆಗೆ ವಿಶೇಷ ಅನದಾನ ನೀಡುವ ಬಗ್ಗೆ ವರದಿಯು ವಿಧಾನಮಂಡಲದಲ್ಲಿ ಮಂಡನೆಯಾಗಿ ಚರ್ಚೆಯಾಗಿ ನಿರ್ಣಯಕೈಗೊಂಡ ನಂತರ ನಿರ್ಧರಿಸಲಾಗುತ್ತದೆ. |

PDS 12 SDP 2026

(ಡಿ. ಸುಧಾಕರ್)
ಸಚಿವರು
ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ ಸಚಿವರು